


ಚಲಿಸುವ ಹಳಿ ಮೇಲೆ ರೈಲಿನ ಓಟ



ಪ್ರವಾಸಿಗರನ್ನು ಕರೆತರುವ ವಾಹನ




ತಮಿಳುನಾಡಿನ ರಾಮೇಶ್ವರದ ಎರಡು ಮುಖ್ಯ ಆಕರ್ಷಣೆಗಳಲ್ಲಿ ಒಂದು ಪಾಂಬಂ ಸೇತುವೆ; ಇನ್ನೊಂದು ಧನುಷ್ಕೋಟಿ. ಸಮುದ್ರದ ಮಧ್ಯೆ ಇರುವ ಪಾಂಬಂ ಸೇತುವೆ ರೈಲು– ಬರುವಾಗ ಹಳಿಯನ್ನು ಬಿಟ್ಟುಕೊಡುತ್ತದೆ. ಅದೇ ಹಡಗುಗಳು ಬರುವಾಗ ಮೇಲಕ್ಕೆ ತೆರೆದುಕೊಂಡು ಹಡಗುಗಳಿಗೆ ಸಂಚರಿಸಲು ದಾರಿ ಮಾಡಿಕೊಡುತ್ತದೆ. ಸಿಬ್ಬಂದಿಯ ಸಹಾಯದಿಂದ ಈ ಕಾರ್ಯನಿರ್ವಹಣೆ ನಡೆಯುತ್ತಿದ್ದು ಇದು ಅತ್ಯಂತ ಅಪಾಯಕಾರಿ ಸೇತುವೆ ಎಂದೂ ಗುರುತಿಸಲಾಗಿದೆ.

ಕನ್ಯಾಕುಮಾರಿಯಿಂದ ರಾತ್ರಿ ಹೊರಡುವ ರೈಲು ಬೆಳಗಿನ ಜಾವ ಸೂರ್ಯ ಕಿರಣ ಸ್ಪರ್ಶಿಸುವ ವೇಳೆಗೆ ರಾಮೇಶ್ವರಕ್ಕೆ ತಲುಪುತ್ತದೆ. ರಾಮೇಶ್ವರಕ್ಕೆ ಸನಿಹದಲ್ಲಿ ಸಮುದ್ರ ಮಧ್ಯದಲ್ಲಿ ನಿರ್ಮಿಸಿರುವ ಪಾಂಬಂ ಸೇತುವೆ ಅತ್ಯಾಧುನಿಕ ತಂತ್ರಜ್ಞಾನಕ್ಕೆ ಹಿಡಿದ ಕೈಗನ್ನಡಿ.

ಹಿಂದೂ ಮಹಾಸಾಗರ –ಬಂಗಾಳಕೊಲ್ಲಿಯ ಸಂಗಮ ಧನುಷ್ಕೋಟಿ. ರಾಮೇಶ್ವರದಿಂದ ಇರುವ ದೂರ 20 ಕಿ.ಮೀ. ಐದು ದಶಕಗಳ ಹಿಂದೆ ಪ್ರಮುಖ ವಾಣಿಜ್ಯ –ವ್ಯಾಪಾರ ಕೇಂದ್ರವಾಗಿತ್ತು. ಶ್ರೀಲಂಕಾ – ಭಾರತದ ಜಲಸಂಧಿ; ಪ್ರವಾಸಿಗರ ಸ್ವರ್ಗ.

ರಾಮೇಶ್ವರಕ್ಕೆ ಹೋದವರು ಧನುಷ್ಕೋಟಿಗೆ ಹೋಗದೆ ವಾಪಸ್ ಬರುವುದು ವಿರಳ. ಒಂದೊಮ್ಮೆ ಹೋಗದೆ ಬಂದರೆ ಹೆಸರಾಂತ ಪ್ರವಾಸಿ ಸ್ಥಳ ಒಂದನ್ನು ನೋಡುವ ಅವಕಾಶ ಕಳೆದುಕೊಂಡಂತೆಯೇ. ರಾಮೇಶ್ವರದಿಂದ ಇಲ್ಲಿಗೆ ಹೋಗಲು ಸಾಕಷ್ಟು ಬಸ್ಸುಗಳ ಸೌಲಭ್ಯವಿದೆ.

ಧನುಷ್ಕೋಟಿ ಪಾಂಬಂ ದ್ವೀಪದ ಆಗ್ನೇಯ ತುದಿಯಲ್ಲಿದೆ. ಪಾಂಬಂ ತಮಿಳುನಾಡಿನ ದ್ವೀಪಗಳಲ್ಲಿ ಒಂದು. ಎರಡು ಸಮುದ್ರಗಳ ಸಂಗಮ ಸ್ಥಳ ಧನುಷ್ಕೋಟಿ. ವಿಶಾಲವಾಗಿರುವ ಈ ಸ್ಥಳ ನೋಡಲು ಬಲು ಸುಂದರ. ಒಂದರ ಹಿಂದೆ ಒಂದರಂತೆ ಒತ್ತೊತ್ತಾಗಿ ಅಪ್ಪಳಿಸುತ್ತಾ ಬರುವ ಕಡಲ ಅಲೆಗಳಿಗೆ ಮನಸ್ಸು ಸೋಲುತ್ತದೆ. ಎಂತಹ ಅರಸಿಕರನ್ನೂ ಸೂಜಿಗಲ್ಲಿನಂತೆ ಸೆಳೆದಿಡುವ ಶಕ್ತಿ ಅದರದು.

ಉರಿ ಬಿಸಿಲಿನ ಮಧ್ಯೆಯೂ ನೋಡುತ್ತಾ ನಿಂತರೆ ಹೊತ್ತು ಸಾಗುವುದೇ ತಿಳಿಯದು. ಈ ಸಮುದ್ರವನ್ನು ನೋಡುವುದೇ ಒಂದು ಹೊಸ ಅನುಭವ. ಕಣ್ಣು ಹಾಯಿಸಿದಷ್ಟು ದೂರಕ್ಕೂ  ಬರೀ ನೀರು. ರಸ್ತೆಯ ಅಂಚಿನಲ್ಲೆ ಸಮುದ್ರ ಇದ್ದು, ಅಲೆಗಳು ಬಿರುಸಿನಿಂದ ಕೂಡಿರುವುದರಿಂದ ಅಪಾಯಕಾರಿಯೂ ಹೌದು. ದಂಡೆಯಲ್ಲಿ ಹೇರಳ ಮರಳರಾಶಿ.

ಧನುಷ್ಕೋಟಿಯಿಂದ ಶ್ರೀಲಂಕಾಗೆ ಇರುವ ದೂರ ಕೇವಲ 29 ಕಿ.ಮೀ. ಇಲ್ಲಿನ ತಲೈಮುನ್ನಾರ್‌ವರೆಗೆ ವ್ಯಾಪಾರ ವಹಿವಾಟಿನ ಉದ್ದೇಶದಿಂದ ಈ